ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.**

**ಸಿ.ಸಿ.ನಂ.79/2023**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಸೂರನಗೌಡ** | | |
| **ತಂದೆಃಹೆಸರು** | **ಸಂಗನಗೌಡ** | **ಪಿಡಬ್ಲೂಃ** | **10** |
| **ವಯಸ್ಸು** | **54 ವರ್ಷ** | **ಸಿಡಬ್ಲೂಃ** | **13** |
| **ಉದ್ಯೋಗಃ** | **ಮುಖ್ಯಪೇದೆ** | | |
| **ವಾಸ ಸ್ಥಳಃ** | **ಮಸ್ಕಿ ಪೋಲೀಸ್ ಠಾಣೆ.** | | |

**ದಿನಾಂಕ 25-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಈ ದಿನ ನ್ಯಾಯಾಲಯದಲ್ಲಿ 1, 2 ನೇ ಆರೋಪಿತರು ಗೈರು ಹಾಜರಾಗಿದ್ದು, ಆರೋಪಿತರ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ನಾನು 2022 ರಿಂದ ಜುಲೈ 2024 ರವರೆಗೆ ಸಿಂಧನೂರು ಗ್ರಾಮಾಂತರ ಠಾಣೆಯಲ್ಲಿ ಮುಖ್ಯಪೇದೆ ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕಃ04.11.2022 ರಂದು ರಾ. 9-30 ಗಂಟೆಗೆ ನಾನು ಠಾಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ದೂರುದಾರರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿ, ಸದರಿ ದೂರಿನ ಆಧಾರದ ಮೇಲೆ ಠಾಣಾ ಮೊಕದ್ದಮೆ ಸಂಖ್ಯೆ 206/2022 ಪ್ರಕರಣವನ್ನು ಕಲಂ.323, 324, 354, 506 ಸಹವಾಚಕ 34 ಭಾ.ದಂ.ಸಂ. ಅಡಿಯಲ್ಲಿ ದಾಖಲಿಸಿ ಪ್ರಥಮ

ವರ್ತಮಾನ ವರದಿಯನ್ನು ತಯಾರಿಸಿ ಮಾನ್ಯ ಘನ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಯವರಿಗೆ ಸಲ್ಲಿಸಿರುತ್ತೇನೆ. ಸಾಕ್ಷಿಯು ನಿಪಿ-1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಪ್ರಥಮ ವರ್ತಮಾನ ವರದಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ ಕಾರಣ ಪ್ರಥಮ ವರ್ತಮಾನ ವರದಿಯನ್ನು ನಿ.ಪಿ.9, ಸಾಕ್ಷಿಯ ಸಹಿಯನ್ನು ನಿ.ಪಿ.9(ಎ) ಎಂದು ಗುರುತಿಸಲಾಯಿತು.

ಮರುದಿನ ಗುನ್ನಾ ಸ್ಥಳದಲ್ಲಿ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಪಂಚರಾದ ಚಾಸಾ-9 & 10 ರವರ ಸಮಕ್ಷಮ ನಿಪಿ-3 ರಂತೆ ಪಂಚನಾಮೆ ಮಾಡಿರುತ್ತೇನೆ. ನಿಪಿ-3 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3 ಸಿ ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯನ್ನು ಚಾಸಾ-11 ರವರು ಬರೆದಿದ್ದರು. ಆ ಕಾಲಕ್ಕೆ ಮು.ಮಾ. 1 ರಿಂದ 3 ನ್ನು ವಶಕ್ಕೆ ಪಡೆದಿರುತ್ತೇನೆ. ಆ ಸ್ಥಳದಲ್ಲಿ ಫೋಟೋವನ್ನು ತೆಗೆದು, ಕಲಂ. 65 ಬಿ ಪ್ರ.ಪತ್ರ ಕೊಟ್ಟಿರುತ್ತೇನೆ. ಸಾಕ್ಷಿಯು ಫೋಟೋವನ್ನು ನೋಡಿ ಗುರುತಿಸಿದ್ದು, ಅದಕ್ಕೆ ಸಿ ಡಿ ಇಲ್ಲದೇ ಇರುವ ಕಾರಣ, ನಿಶಾನೆಗೊಳಿಸದೇ ಕಡತದಲ್ಲಿ ಹಾಗೆಯೇ ಇರಿಸಲಾಯಿತು. ಕಲಂ. 65 ಬಿ ಪ್ರಮಾಣ ಪತ್ರವನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10 ಎ ಎಂದು ಗುರುತಿಸಲಾಯಿತು.

ನಂತರ ಚಾಸಾ-1 ರವರ ಮರು ಹೇಳಿಕೆ & ಉಳಿದ ಎಲ್ಲಾ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿರುತ್ತೇನೆ. ನಂತರ ಗಾಯಾಳುಗಳ ಗಾ.ಪ್ರ.ಪತ್ರವನ್ನು ನಿಪಿ-4 ರಿಂದ 8 ನ್ನು ಪಡೆದಿರುತ್ತೇನೆ. ನಿಪಿ-4 ರಿಂದ 8 ರಲ್ಲಿನ ಸಾಕ್ಷಿಯ ಸಹಿಗಳನ್ನು ನಿಪಿ-4 ಬಿ ಯಿಂದ 8 ಬಿ ಎಂದು ಗುರುತಿಸಲಾಯಿತು. ನಂತರ ಮುಂದಿನ ತನಿಖೆಯನ್ನು ಚಾಸಾ-14 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ**

1. ಗುನ್ನಾ ಸ್ಥಳದ ಪಂಚನಾಮೆಗೆ ಯಾವ ದಾರಿಯ ಮುಖಾಂತರ ಹೋಗಿದ್ದಿರಿ ಎಂದು ಪಂಚನಾಮೆಯಲ್ಲಿ ಬರೆದಿಲ್ಲ ಎಂದರೆ ಸರಿ. ಗುನ್ನಾ ಸ್ಥಳಕ್ಕೆ ಹೋಗಲು 2 ದಾರಿಗಳಿವೆ ಎಂದರೆ ಸರಿ. ಠಾಣೆಯಿಂದ ಗುನ್ನಾ ಸ್ಥಳ ಎಷ್ಟು ದೂರದಲ್ಲಿದೆ ಎಂದು ಪಂಚನಾಮೆಯಲ್ಲಿ ನಮೂದಿಸಿಲ್ಲ. ನೀವು ಸ್ಥಳವನ್ನು ಗುರುತಿಸಲು ಆಗುವುದಿಲ್ಲ ಎಂದರೆ ಸಾಕ್ಷಿಯು ನಾನು ತನಿಖಾಧಿಕಾರಿ ಆದ್ದರಿಂದ ಗುರುತಿಸಬಲ್ಲೆ ಎನ್ನುತ್ತಾರೆ.

2. ಆ ದಿನ ಸ್ಥಳದಲ್ಲಿ ನಾನು, ಪಂಚರು & ತನಿಖಾ ಸಹಾಯಕರು ಇದ್ದೆವು. ಗುನ್ನಾ ಸ್ಥಳ ಅಂಬಾಮಠದಿಂದ ಯಾವ ದಿಕ್ಕಿಗೆ ಬರುತ್ತದೆ ಎಂದರೆ ಸಾಕ್ಷಿಯು ಉತ್ತರ ದಿಕ್ಕಿಗೆ ಇದೆ ಎನ್ನುತ್ತಾರೆ. ಗುನ್ನಾ ಸ್ಥಳ ಅಂಬಾಮಠದ ಪೂರ್ವಕ್ಕೆ ಬರುತ್ತದೆ ಎಂದರೆ ಸರಿಯಲ್ಲ. ಗುನ್ನಾ ಸ್ಥಳದಲ್ಲಿ

ಕಾಲುವೆ-14 ಬರುತ್ತದೆ ಎಂದರೆ ಸಾಕ್ಷಿಯು ನಾನು ಘಟನಾ ಸ್ಥಳದಲ್ಲಿ ಏನು ಇದೆಯೋ ಅದನ್ನು ನಮೂದಿಸಿದ್ದೇನೆ ಎನ್ನುತ್ತಾರೆ.

3. ಗುನ್ನಾ ಸ್ಥಳದಲ್ಲಿ ಪೈಪನ್ನು ಜಪ್ತುಪಡಿಸಿಕೊಂಡಿಲ್ಲ. ಸ್ಥಳದಲ್ಲಿ ಬೋರ್ವೆಲ್ ಪಾಯಿಂಟ್ ಬಗ್ಗೆ ಪಂಚನಾಮೆಯಲ್ಲಿ ನಮೂದಿಸಿಲ್ಲ. ಪಂಚಾಯಿತಿಯಿಂದ ವಿದ್ಯುತ್ ಸಂಪರ್ಕದ ಬಗ್ಗೆ ದಾಖಲೆಯನ್ನು ಪಡೆದಿಲ್ಲ.

4. ಆ ದಿನ ನಾವು ಠಾಣೆಯನ್ನು 12-30 ಕ್ಕೆ ಬಿಟ್ಟಿದ್ದೆವು. ಠಾಣೆಯಿಂದ ಗುನ್ನಾ ಸ್ಥಳವು ಸುಮಾರು 18-20 ಕಿ.ಮೀ ದೂರದಲ್ಲಿದೆ. ನಾವು ವೆಂಕಟೇಶ್ವರ ಕ್ಯಾಂಪಿನಿಂದ ಗುನ್ನಾ ಸ್ಥಳಕ್ಕೆ ಹೋಗಿದ್ದೆವು. ವೆಂಕಟೇಶ್ವರ ಕ್ಯಾಂಪಿನಿಂದ ಹೋದರೆ ಗುನ್ನಾ ಸ್ಥಳ 14 ಕಿಮೀ. ದೂರ ಇದೆ ಎಂದರೆ ಸರಿಯಲ್ಲ.

5. ಪಂಚರನ್ನು ನಮ್ಮ ಸಿಬ್ಬಂದಿ ಕಡೆಯಿಂದ ಕರೆಸಿದ್ದೆನು.

6. ನೀವು ದೂರನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಯಾವುದೇ ಪಂಚನಾಮೆ ಮಾಡಿಲ್ಲ, ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಯಾವುದೇ ಫೋಟೋವನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ನೀವು ಯಾವುದೇ ಗಾಯದ ಪ್ರ.ಪತ್ರಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನೀವು ಸುಳ್ಳು ದೂರು ಪಡೆದು, ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**C/c 2 ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಸಿಂಧನೂರು.**